ವಿಷಯ:- ವಿಜಾಪುರ-ರಾಯಚೂರು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಕೊರತೆ.

44(130)

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಯಚೂರು ಮತ್ತು ಬಿಜಾಪುರ ಜಿಲ್ಲೆಯ ಯಾವ ಯಾವ ನಗರ ಸಭೆ, ಪುರಸಭೆ ಮತ್ತು ಪುರ ಪಂಚಾಯಿತಿಯ ಸ್ಥಳಗಳು ಹರಿಯುತ್ತಿರುವ ನದಿಗಳಿಂದ ಕೇವಲ 30 ಕಿ.ಮೀ. ಅಂತರದ ಒಳಗಡೆ ಇವೆ? ಅದಾಗ್ಯೂ ಕುಡಿಯುವ ನೀರಿನ ಕೊರತೆಯಿಂದ ಈ ಸ್ಥಳಗಳು ಬೇಸಿಗೆ ಸಮಯದಲ್ಲಿ ಒಣಗುತ್ತಿರುವುದು ಸಾಮಾನ್ಯ ಸಂಗತಿಯಾಗಿದೆಯಲ್ಲವೇ? ಹಾಗಿದ್ದಲ್ಲಿ ಶಾಶ್ವತ ಪರಿಹಾರ ಯೋಜನೆಗಳನ್ನೇನಾದರೂ ಸರ್ಕಾರ ಕೈಗೊಂಡಿದೆಯೇ? ದಯವಿಟ್ಟು ಸ್ಪಷ್ಟಪಡಿಸಬೇಕು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ರಾಯಚೂರು ಜಿಲ್ಲೆ

ರಾಯಚೂರು ಜಿಲ್ಲೆಯ ಈ ಕೆಳಗಿನ ನಗರಸಭೆ, ಪುರಸಭೆ ಹಾಗೂ ಪುರ ಪಂಚಾಯತ್‌ಗಳು ಕೃಷ್ಣಾ ನದಿಯಿಂದ 30 ಕಿ.ಮೀ.ಗಿಂತ ಕಡಿಮೆ ಅಂತರದಲ್ಲಿ ಬರುತ್ತವೆ:

ಅ. ರಾಯಚೂರು ಆ. ದೇವದುರ್ಗ ಇ. ಲಿಂಗಸುಗೂರು ಈ. ಮುದಗಲ್

ಆ. ರಾಯಚೂರು ನಗರಸಭೆಗೆ ದೇವಸಗೂರು ನೀರು ಯೋಜನೆಯಿಂದ ಹಾಗೂ ತುಂಗಭದ್ರಾ ಹೈಲೆವಲ್ ಕಾಲುವೆ (ರಾಂಪುರ ಹೆಡ್‌ವರ್ಕಸ)ಯಿಂದ ನೀರನ್ನು ಜಲಸಂಗ್ರಹಾಗಾರದಲ್ಲಿ ಶೇಖರಿಸಿ ಸರಬರಾಜು ಮಾಡಲಾಗುತ್ತಿದೆ. ಶಾಶ್ವತ ನೀರು ಸರಬರಾಜು ಯೋಜನೆಯನ್ನು ಕೃಷ್ಣಾ ನದಿಯಿಂದ ನೀರು ಸರಬರಾಜು ಮಾಡಲು ರೂ. 2600 ಲಕ್ಷಗಳ ವೆಚ್ಚದಲ್ಲಿ ಅಂದಾಜನ್ನು ತಯಾರಿಸಿ ಓ.ಇ.ಸಿ.ಎಫ್. ಹುಡ್ಕೋ ನೆರವಿಗಾಗಿ ಪ್ರಸ್ತಾಪಿಸಲಾಗಿದೆ.

ಆ. ದೇವದುರ್ಗ ಪಟ್ಟಣಕ್ಕೆ 1979ರಲ್ಲಿ ನೀರು ಸರಬರಾಜು ಯೋಜನೆಯನ್ನು ಕಾರ್ಯ-ಗತಗೊಳಿಸಲಾಗಿದ್ದು ಸದರಿ ನಿರ್ವಹಣೆಯನ್ನು ಪಟ್ಟಣ ಪಂಚಾಯಿತಿ ನಿರ್ವಹಿಸುತ್ತಿದೆ.

ಇ. ಲಿಂಗಸುಗೂರು ಮತ್ತು ಮುದಗಲ್ ಪಟ್ಟಣಗಳಿಗೆ ಕೃಷ್ಣಾನದಿಯ ಮೂಲದಿಂದ ನೀರು ಸರಬರಾಜು ಯೋಜನೆಗೆ ರೇಖಾ ಅಂದಾಜು ಪಟ್ಟಿಯನ್ನು ತಯಾರಿಸಿ ಓ.ಇ.ಸಿ.ಎಫ್. ಸಾಲಕ್ಕಾಗಿ ಪ್ರಸ್ತಾಪಿಸಲಾಗಿದೆ.

ರಾಯಚೂರು ಜಿಲ್ಲೆಯ ಈ ಕೆಳಗಿನ ಪಟ್ಟಣಗಳು ತುಂಗಭದ್ರಾ ನದಿಯಿಂದ 30 ಕಿ.ಮೀ. ಅಂತರದ ಒಳಗಡೆ ಬರುತ್ತವೆ.

ಆ. ಗಂಗಾವತಿ ಆ. ಮಾನವಿ ಇ. ಕೊಪ್ಪಳ ಈ. ಸಿಂಧನೂರು

ಈ ನಾಲ್ಕು ಪಟ್ಟಣಗಳಿಗೂ ನೀರು ಸರಬರಾಜು ಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು ಕೆಲಸಗಳು ಪ್ರಗತಿಯಲ್ಲಿ ಇವೆ.

ವಿಜಾಪುರ ಜಿಲ್ಲೆ

ವಿಜಾಪುರ ಜಿಲ್ಲೆಯ ಈ ಕೆಳಗಿನ ನಗರಸಭೆ:ಪುರಸಭೆ, ಪುರಪಂಚಾಯತ್ ಸ್ಥಳಗಳು ಹರಿಯುತ್ತಿರುವ ನದಿಗಳಿಂದ ಕೇವಲ 30 ಕಿ.ಮೀ. ಅಂತರದ ಒಲಗಡೆ ಇವೆ.

1.	ನಗರಸಭೆ, ರಬಕವಿ ಬನಹಟ್ಟಿ	ಕೃಷ್ಣಾನದಿ
2.	ನಗರಸಭೆ, ಬಾಗಲಕೋಟೆ	ಘಟಪ್ರಭಾ
3.	ಪುರಸಭೆ, ಗುಳೇದಗುಡ್ಡ	ಮಲಪ್ರಭಾ
4.	ಬಾದಾಮಿ, ಪುರಪಂಚಾಯತ್	ಮಲಪ್ರಭಾ
5.	ಜಮಖಂಡಿ, ಪುರಸಭೆ	ಕೃಷ್ಣಾನದಿ
6.	ಇಂಡಿ, ಪುರಸಭೆ	ಭೀಮಾನದಿ
7.	ಮುಧೋಳ, ಪುರಸಭೆ	ಘಟಪ್ರಭಾ
8.	ಮಹಾಲಿಂಗಪುರ ಪುರಸಭೆ	ಕೃಷ್ಣಾನದಿ
9.	ಬೀಳಗಿ, ಪುರಪಂಚಾಯತ್	ಕೃಷ್ಣಾನದಿ
10.	ಹುನಗುಂದ, ಪುರಪಂಚಾಯತ್	ಕೃಷ್ಣಾನದಿ
11.	ಮುದ್ದೇಬಿಹಾಳ, ಪುರಸಭೆ	ಕೃಷ್ಣಾನದಿ
12.	ತೇರದಾಳ, ಪುರಪಂಚಾಯತ್	ಕೃಷ್ಣಾನದಿ
13.	ಬಸವನಬಾಗೇವಾಡಿ, ಪುರಪಂಚಾಯತ್	ಕೃಷ್ಣಾನದಿ

ಬೇಸಿಗೆ ಸಮಯದಲ್ಲಿ ನೀರಿನ ತೊಂದರೆಯಿಂದ ಈ ಕೆಳಗಿನ ನಗರಸಭೆ, ಪುರಸಭೆ, ಪುರಪಂಚಾಯತ್ ಸ್ಥಳಗಳಿಗೆ ಈಗಾಗಲೇ ನದಿ ಮೂಲದಿಂದ ನೀರು ಸರಬರಾಜು ಮಾಡಲಾಗುತ್ತಿದೆ.

1. ರಬಕವಿ ಬನಹಟ್ಟಿ 2. ಜಮಖಂಡಿ 3. ಬಾಗಲಕೋಟೆ 4. ಗುಳೇದಗುಡ್ಡ
5. ಮುದ್ದೇಬಿಹಾಳ

ಈ ಕೆಳಗಿನ ನಗರಸಭೆ, ಪುರಸಭೆ, ಪುರಪಂಚಾಯತ್ ಸ್ಥಳಗಳಿಗೆ ನದಿ ಮೂಲದಿಂದ ಹೊಸ ನೀರು ಸರಬರಾಜು ಯೋಜನೆಗಳು ಪ್ರಗತಿಯಲ್ಲಿವೆ.

1. ರಬಕವಿ-ಬನಹಟ್ಟಿ 2. ಇಂಡಿ 3. ಹುನಗುಂದ-ಇಳಕಲ್ಲ 4. ಗುಳೇದಗುಡ್ಡ

ಈ ಕೆಳಗಿನ ಪುರಸಭೆ ಪಟ್ಟಣ ಪಂಚಾಯತ್ ಸ್ಥಳಗಳಿಗೆ ನೀರು ಸರಬರಾಜು ಯೋಜನೆಗಳನ್ನು ತಯಾರಿಸಲಾಗಿದ್ದು ಮಂಜೂರಾತಿಗೆ ಸಲ್ಲಿಸಿರುತ್ತದೆ.

1. ಬಾದಾಮಿ ಪಟ್ಟಣ 2. ಬಸವನ ಬಾಗೇವಾಡಿ

ಈ ಕೆಳಗಿನ ಪುರಸಭೆ, ಪಟ್ಟಣ ಪಂಚಾಯತ್ ಸ್ಥಳಗಳಿಗೆ ಹೊಸ ಯೋಜನೆಗಳನ್ನು ತಯಾರಿಸಲಾಗುತ್ತಿದೆ.

1. ಮುಧೋಳ (ಘಟಪ್ರಭಾ ನದಿ) 2. ಬೀಳಗಿ (ಕೃಷ್ಣಾನದಿ)

ಮಹಾಲಿಂಗಪುರ ಪಟ್ಟಣಕ್ಕೆ ನದಿ ಮೂಲದಿಂದ ಯೋಜನೆಯನ್ನು ತಯಾರಿಸುವ ಬಗ್ಗೆ ಪುರಸಭೆಯಿಂದ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ವಿಷಯ:- ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆ.

45(210)

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆ ಎಷ್ಟು ವರ್ಷಗಳಿಂದ ಜಾರಿಯಲ್ಲಿ ಇದೆ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದರ ನಿರ್ವಹಣೆಯನ್ನು ಯಾರು ಮಾಡುತ್ತಿದ್ದಾರೆ;

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳು ಪೂರ್ತಿಯಾಗಿದೆ; ಎಷ್ಟು ಅನುದಾನ ಬಿಡುಗಡೆಯಾಗಿದೆ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಗಂಗಾ ಕಲ್ಯಾಣ ಯೋಜನೆಯನ್ನು ದಿನಾಂಕ 2-1-96ರಿಂದ ಅನುಷ್ಠಾನಗೊಳಿಸುತ್ತಿದೆ.

ಆ) ದಿನಾಂಕ 3-1-96 ರಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ವಹಿಸಿಕೊಂಡಿರುತ್ತದೆ.

ಇ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವುದೇ ಕಾಮಗಾರಿ ಕೈಗೊಂಡಿರುವುದಿಲ್ಲ. ಆದುದರಿಂದ ಅನುದಾನವನ್ನು ಸಹ ಬಿಡುಗಡೆ ಮಾಡಿರುವುದಿಲ್ಲ.

ವಿಷಯ:- ರಾಜ್ಯದಲ್ಲಿ ಸಮಾಜ ಕಲ್ಯಾಣ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ.

46(221)

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-